2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,

ಬೆಳಗಾವಿ.

ಸೇಷನ್ ಕೇಸ್ ನಂ.22/2025

ಪಿ.ಡಬ್ಲ್ಯೂಃ 4

ಸಿ.ಡಬ್ಲ್ಯೂಃ 2

| | |
|---|---|
| ಸಾಕ್ಷಿಯ ಹೆಸರುಃ | ಶ್ರೀ. ಮಹಾಂತೇಶ ಶಿವಲಿಂಗಪ್ಪಾ ದೇಸಾಯಿ |
| ತಂದೆಯ ಹೆಸರುಃ | ಶಿವಲಿಂಗಪ್ಪಾ ದೇಸಾಯಿ |
| ವಯಸ್ಸುಃ | 55 ವರ್ಷ |
| ಉದ್ಯೋಗಃ | ಹಾಲಿನ ವ್ಯಾಪಾರ |
| ವಾಸಃ | ಪೋರ್ಟ ರೋಡ ಬೆಳಗಾವಿ |

**ದಿನಾಂಕಃ 26.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 15.10.2024 ರಂದು ಮಾಳಮಾರುತಿ ಪೋಲೀಸ್ ಠಾಣೆಯವರು ಈ ಪ್ರಕರಣದ ಪಂಚನಾಮೆಗಾಗಿ ನನ್ನನ್ನು ಹಾಗೂ ಚಾಸಾಃ 3 ರವರನ್ನು ಕರೆಸಿದ್ದರು. ಪೋಲೀಸರಿಗೆ ನಾವು ಪಂಚನಾಮೆಗೆ ಬರಲು ಒಪ್ಪಿಗೆ ಸೂಚಿಸಿರುತ್ತೇವೆ. ಆ ಕಾಲಕ್ಕೆ ಪೋಲೀಸ್ ಠಾಣೆಯಲ್ಲಿ ಈ ಪ್ರಕರಣದ ದೂರುದಾರಳು ಇದ್ದು, ಆಕೆಯ ತಂದೆಯ ಕೊಲೆಯಾದ ಜಾಗವನ್ನು ತೋರಿಸುತ್ತೇನೆಂದು ಹೇಳಿರುತ್ತಾಳೆ. ಅದರಂತೆ ಆಕೆ ತನ್ನ ಮನೆಗೆ ಕರೆದುಕೊಂಡು ಹೋಗಿರುತ್ತಾಳೆ. ಆ ಕಾಲಕ್ಕೆ ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು, ಶ್ವಾನದಳದವರು, ಮಹಿಳಾ ಪೋಲೀಸರು ಹಾಗೂ ನಾನು, ಚಾಸಾಃ 3 ರವರು ಇದ್ದೇವು. ಪೋಲೀಸ್ ಜೀಪನಲ್ಲಿ ಪಿರ್ಯಾದಿದಾರರ ಮನೆಗೆ ಹೋಗಿರುತ್ತೇವೆ. ಅದು ಮಹಾಂತೇಶ ನಗರದಲ್ಲಿ ರಿಲಾಯನ್ಸ್ ಎಂಬ ಅಂಗಡಿ ಇದ್ದು ಅದರ ಹಿಂಭಾಗದಲ್ಲಿ ಅವರ ಮನೆ ಇರುತ್ತದೆ. ಘಟನಾ ಸ್ಥಳ ಎರಡನೇ ಮಹಡಿಯಲ್ಲಿತ್ತು. ಆ ಕಾಲಕ್ಕೆ ಮನೆಯ ಬೆಡ್ ರೂಮ್ ಹಾಗೂ ಹಾಲ್ ನಲ್ಲಿ ಚಾಸಾಃ 1 ರವರು ತೋರಿಸಿದಂತೆ ಪರಿಶೀಲನೆ ಮಾಡಿರುತ್ತಾರೆ. ಆ ಕಾಲಕ್ಕೆ ಬೆಡ್ ರೂಮ್ ನಲ್ಲಿ ಒಂದು ಸಿರಂಜ್ ಸಿಕ್ಕಿತ್ತು. ಒಂದು ನೀರಿನ ಬಾಟಲಿ, ಒಂದು ತಲೆದಿಂಬು ಅದರ ಮೇಲೆ ಎರಡು ಪಿಲ್ಲೋ ಕವರ್ ಗಳು ಇದ್ದವು.

ಅವುಗಳನ್ನು ಘಟನಾ ಸ್ಥಳದಿಂದ ಪೋಲೀಸರು ಜಪ್ತು ಮಾಡಿರುತ್ತಾರೆ. ಅವುಗಳನ್ನು ಘಟನಾ ಸ್ಥಳದಲ್ಲೇ ಪ್ಯಾಕ್ ಮಾಡಿ ಸೀಲ್ ಮಾಡಿರುತ್ತಾರೆ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದು ಪಂಚನಾಮೆಯಾಗಿದ್ದು ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿಃ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 7(ಎ) ಎಂದು ಗುರುತಿಸಲಾಯಿತು.

2. ಈಗಾಗಲೇ ಮು.ಮಾ. 1 ಎಂದು ಗುರುತಾದ ತಲೆದಿಂಬನ್ನು ಹಾಗೂ ಮು.ಮಾ. 2 ಎಂದು ಗುರುತಾದ ತಲೆದಿಂಬಿನ ಕವರ್ ನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಮು.ಮಾ. 1 ಮತ್ತು 2 ರ ಪ್ಯಾಕೇಟಗಳ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿಗಳು ಇವೆ ಎಂದು ಗುರುತಿಸುತ್ತಾರೆ.

3. ಸಾಕ್ಷಿ ಮುಂದುವರೆದು ಹೇಳುತ್ತಾರೆ ಪಂಚನಾಮೆ ಕಾಲಕ್ಕೆ ನನ್ನ ಸಮಕ್ಷಮ ಜಪ್ತು ಮಾಡಿದ ಎಲ್ಲಾ ವಸ್ತುಗಳನ್ನು ಮತ್ತೇ ತೋರಿಸಿದರೆ ಗುರುತಿಸುತ್ತೇನೆಂದು ಹೇಳುತ್ತಾರೆ. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ಪ್ಲಾಸ್ಟಿಕ್ ನೀರಿನ ಬಾಟಲ್ ಇದ್ದು ಅದರಲ್ಲಿ ಅರ್ಧ ನೀರು ಇದ್ದು ಅದು Aquachoice ಕಂಪನಿಯದ್ದು ಇರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಹಾಗೂ ಅದರ ಮೇಲೆ ಅಂಟಿಸಿದ ಚೀಟಿಯಲ್ಲೂ ಸಹ ನನ್ನ ಸಹಿ ಇದೆ ಎಂದು ಹೇಳುತ್ತಾರೆ. ಸದರಿ ಬಾಟಲಿಯನ್ನು ಈಗ ಮು.ಮಾ. 3 ಎಂದು ಗುರುತಿಸಲಾಯಿತು.

4. ಈಗ ಮತ್ತೊಂದು ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿದ ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ನೀಡಲ್ ಇಲ್ಲದ ಒಂದು ಸಿರಿಂಜ್ ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ ಸಿರಿಂಜ್ ನ್ನು ಈಗ ಮು.ಮಾ. 4 ಎಂದು ಗುರುತಿಸಲಾಯಿತು. ಸದರಿ ಪ್ಯಾಕೇಟ ಮೇಲೆ ಅಂಟಿಸಿದ ಚೀಟಿಯಲ್ಲಿ ಸಾಕ್ಷಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ.

5. ಈಗ ಮತ್ತೊಂದು ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿದ ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಮತ್ತೊಂದು ತಲೆದಿಂಬಿನ ಕವರ್ ಇದ್ದು ಅದನ್ನು ಸಹ ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ ತಲೆದಿಂಬಿನ ಕವರನ್ನು ಈಗ ಮು.ಮಾ. 5 ಎಂದು ಗುರುತಿಸಲಾಯಿತು. ಸದರಿ ಪ್ಯಾಕೇಟ ಮೇಲೆ ಅಂಟಿಸಿದ ಚೀಟಿಯಲ್ಲೂ ಸಹ ಸಾಕ್ಷಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ.

6. ಸಾಕ್ಷಿಯು ಈಗ ಒಂದು ಫೋಟೋವನ್ನು ನೋಡಿ ಇದು ಪೋಲೀಸ್ ಠಾಣೆಯಲ್ಲಿ ಪಂಚನಾಮೆಗೆ ಹೋಗುವ ಮುನ್ನ ತೆಗೆದಿದ್ದು ಎಂದು ಹೇಳುತ್ತಾರೆ. ಮತ್ತೊಂದು ಫೋಟೋವನ್ನು ನೋಡಿ ಅದು ಘಟನಾ ಸ್ಥಳದ ಮನೆಯಲ್ಲಿ ಪಂಚನಾಮೆ ಮಾಡಿದ ಜಾಗ ಎಂದು ಗುರುತಿಸುತ್ತಾರೆ. ಮತ್ತೇ ಎರಡು ಫೋಟೋಗಳನ್ನು ನೋಡಿ ಇವುಗಳನ್ನು ಪಂಚನಾಮೆ ಕಾಲಕ್ಕೆ ಘಟನಾ ಸ್ಥಳದಲ್ಲಿ ವಸ್ತುಗಳನ್ನು ಜಪ್ತು ಮಾಡಿದ ನಂತರ ಅವುಗಳನ್ನು ಪ್ಯಾಕ್ ಮಾಡಿ ಸೀಲ್ ಮಾಡಿದ ಕಾಲಕ್ಕೆ ತೆಗೆದಿದ್ದು ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ಕ್ರಮವಾಗಿ ನಿಪಿಃ 8 ರಿಂದ 11 ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಆ ದಿನ ಸಾಯಂಕಾಲ 04.00 ರಿಂದ 04.30 ಗಂಟೆಯವರೆಗೆ ಮಾಡಿರುತ್ತಾರೆಂದು ಹೇಳುತ್ತಾರೆ.

7. ಸಾಕ್ಷಿಯು ಈಗ ಎರಡು ದಾಖಲೆಗಳನ್ನು ನೋಡಿ ಒಂದು ಪೋಲೀಸರು ಪಂಚನಾಮೆಗೆ ಬನ್ನಿ ಎಂದು ಕೊಟ್ಟ ನೋಟೀಸ್ ಎಂದು, ಮತ್ತೊಂದು ನಾವು ಕೊಟ್ಟ ಒಪ್ಪಿಗೆ ಪತ್ರ ಎಂದು ಹಾಗೂ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಗಳನ್ನು ಈಗ ಕ್ರಮವಾಗಿ ನಿಪಿಃ 12 ಮತ್ತು 13 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 12(ಎ) ಮತ್ತು 13(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 5 ನೇ ಆರೋಪಿತರ ಪರ ಶ್ರೀ. ಎಲ್.ಎಂ.ಎಚ್. ವಕೀಲರಿಂದಃ**

8. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಮನೆಯಿಂದ ಮಾಳಮಾರುತಿ ಪೋಲೀಸ್ ಠಾಣೆ 4 ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ನನಗೆ ಮಾಳಮಾರುತಿ ಪೋಲೀಸ್ ಠಾಣೆಯ ಪೋಲಿಸೀರು ಪರಿಚಯವಿದ್ದಾರೆ ಎಂದರೆ ಸರಿ. ಆದರೆ ನನಗೆ ಆ ಠಾಣೆಯ ಪೋಲೀಸ್ ನಿರೀಕ್ಷಕರು

ಪರಿಚಯವಿದ್ದರು ಎನ್ನುವುದು ಸರಿಯಲ್ಲ. ನೋಟೀಸನ್ನು ನನಗೆ ಪೋಲೀಸ್ ಠಾಣೆಯಲ್ಲಿ ನೀಡಿರುತ್ತಾರೆ.

ಪ್ರಶ್ನೆಃ ಪಂಚನಾಮೆಗೆ ಬನ್ನಿ ಎಂದು ನಿಮ್ಮನ್ನು ಯಾರು ಮತ್ತು ಎಲ್ಲಿ ಕರೆದರು ?
ಉತ್ತರಃ ನಾನು ಹಾಗೂ ಚಾಸಾಃ 3 ರವರು ಆ ದಿನ ಠಾಣೆಯ ಮುಂದೆ ಹೋಗುತ್ತಿದ್ದೇವು ಆಗ ಠಾಣೆಯ ಪೋಲೀಸ್ ಪೇದೆ ನಮ್ಮನ್ನು ಪೋಲೀಸ್ ಠಾಣೆಗೆ ಕರೆದಿರುತ್ತಾರೆ ಆದರೆ ಅವರ ಹೆಸರು ನನಗೆ ಏನೆಂದು ಗೊತ್ತಿಲ್ಲ.

ಪ್ರಶ್ನೆಃ ನೀವು ಎಷ್ಟು ಪೋಲೀಸ್ ಕೇಸ್ ಗಳಲ್ಲಿ ಪಂಚರಾಗಿ ಭಾಗವಹಿಸಿದ್ದೀರಿ ?
ಉತ್ತರಃ ಈ ಪ್ರಕರಣವನ್ನು ಹೊರತುಪಡಿಸಿ ಮತ್ತೊಂದು ಪ್ರಕರಣದಲ್ಲಿ ನನ್ನನ್ನು ಪಂಚರಾಗಿ ಕರೆದಿದ್ದರು.

9. ಈ ಪ್ರಕರಣದ ಗುನ್ನಾ ಸಂಖ್ಯೆಯನ್ನು ನನಗೆ ಹೇಳಲು ಬರುವುದಿಲ್ಲ. ನೋಟೀಸ್ ನಲ್ಲಿ ಬರೆದಿದ್ದ ವಿಚಾರ ನನಗೆ ಗೊತ್ತು. ಸದರಿ ನೋಟೀಸ್ ನಲ್ಲಿ ಯಾವ ತಾರೀಖಿನಂದು ಎಷ್ಟು ಗಂಟೆಗೆ ಬರಬೇಕೆಂದು ಬರೆದಿದ್ದಾರೆಯೇ ಎಂದು ತಿಳಿದಿದೆಯೇ ಎಂದರೆ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿಃ 12 ನ್ನು ನೀಡಿ ಅದರಲ್ಲಿ ಯಾವ ತಾರೀಖಿನಂದು ಹಾಗೂ ಎಷ್ಟು ಗಂಟೆಗೆ ಪಂಚನಾಮೆಗೆ ಬರಬೇಕೆಂದು ನಮೂದಿಸಿಲ್ಲ ಎಂದರೆ ಸರಿ ಎಂದು ಹೇಳುತ್ತಾರೆ. ಒಪ್ಪಿಗೆ ಪತ್ರದಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತು.

ಪ್ರಶ್ನೆಃ ಒಪ್ಪಿಗೆ ಪತ್ರದಲ್ಲಿ ಏನು ಬರೆದಿದ್ದಾರೆ ?
ಉತ್ತರಃ ಪಂಚನಾಮೆಗೆ ಪಂಚರಾಗಿ ಬರಲು ಒಪ್ಪಿಗೆ ಇದೆ ಎಂದು ಬರೆದಿದೆ.

ಪ್ರಶ್ನೆಃ ಈ ದಿನ ನ್ಯಾಯಾಲಯಕ್ಕೆ ಬರುವ ಮುನ್ನ ಪೋಲೀಸ್ ಠಾಣೆಗೆ ಹೋಗಿದ್ದೀರಾ ?
ಉತ್ತರಃ ಇಲ್ಲ, ಪೋಲೀಸರೇ ಮನೆಗೆ ಬಂದು ನೋಟೀಸ್ ನೀಡಿದ್ದರಿಂದ ನೇರವಾಗಿ ನ್ಯಾಯಾಲಯಕ್ಕೆ ಬಂದಿರುತ್ತೇನೆ.

10. ನನಗೆ ರಾಜು ಪದ್ಮಣ್ಣನವರ ರವರ ಪರಿಚಯವಿಲ್ಲ. ನಾನು, ಚಾಸಾಃ 3, ರಾಜು ಪದ್ಮಣ್ಣನವರ, ಸಂತೋಷ ಪದ್ಮಣ್ಣನವರ ಒಂದೇ ಜಾತಿಗೆ ಸೇರಿದವರು ಎಂದರೆ ನಾನು ಹಾಗೂ ಚಾಸಾಃ 3 ರವರು ಒಂದೇ ಜಾತಿಗೆ ಸೇರಿದವರು ಹಾಗೂ ಇನ್ನಿಬ್ಬರ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಚಾಸಾಃ 1 ನನಗೇನು ವೈಯಕ್ತಿಕವಾಗಿ ಪರಿಚಯವಿಲ್ಲ ಎನ್ನುವುದು ಸರಿ. ಪೋಲೀಸ್ ಠಾಣೆಯಿಂದ ಪಂಚನಾಮೆಗೆ ಸುಮಾರು 35 ಮಂದಿ ಹೋಗಿದ್ದೇವು. ಆ ಕಾಲಕ್ಕೆ 4–5 ಗಾಡಿಯಲ್ಲಿ ಹೋಗಿದ್ದೇವು.

ಪ್ರಶ್ನೆಃ ಪಂಚನಾಮೆಯನ್ನು ಹೀಗೆಯೇ ಬರೆಯಿರಿ ಎಂದು ನಿವೇನಾದರೂ ಹೇಳಿ ಬರೆಸಿದ್ದೀರಾ?
ಉತ್ತರಃ ಇಲ್ಲ, ಆದರೆ ಬರೆದ ಪಂಚನಾಮೆಯನ್ನು ಓದಿ ಸಹಿ ಮಾಡಿರುತ್ತೇನೆ.

11. ಪಂಚನಾಮೆಯ 2 ನೇ ಪುಟದಲ್ಲಿ ಪಂಚನಾಮೆಗಾಗಿ ಆಂಜನೇಯ ನಗರಕ್ಕೆ ಹೋಗಿದ್ದೇವು ಎಂದು ಬರೆದಿದೆ ಎಂದರೆ ಸರಿ.

ಪ್ರಶ್ನೆಃ ನಿಪಿಃ 9 ರಲ್ಲಿ ನಿಮ್ಮ ಪ್ರಕಾರ ಮೊದಲ ಫ್ಲೋರ್ ಗೆ ಪಂಚನಾಮೆಗೆ ಹೋಗಿದ್ದೀರಿ ?
ಉತ್ತರಃ ಹೌದು, ಅದು 3 ಮಹಡಿಗಳ ಕಟ್ಟಡವಿದ್ದು ಮೊದಲ ಫ್ಲೋರ್ ನ್ನು ನಾನು 2 ನೇ ಫ್ಲೋರ್ ಎಂದು ಹೇಳಿದ್ದೇನೆಂದು ಹೇಳುತ್ತಾರೆ.

12. ನಾನು ತೋರಿಸಿದ ಫ್ಲೋರ್ ನ್ನು ಪಂಚನಾಮೆಯಲ್ಲಿ 2 ನೇ ಮಹಡಿಯ ಜಾಗ ಎಂದು ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿಃ 8 ರಲ್ಲಿ ಕೇವಲ 22 ಮಂದಿ ಇದ್ದಾರೆ ಎಂದರೆ ನಾನು ಅದನ್ನು ಎಣಿಸಿರುವುದಿಲ್ಲ. ನಿಪಿಃ 8 ರ ಫೋಟೋದಲ್ಲಿ ಚಾಸಾಃ 1 ಸಂಜನಾ ಇದ್ದು ಆಕೆಯ ಪಕ್ಕದಲ್ಲಿರುವ ವ್ಯಕ್ತಿ ರಾಜು ಪದ್ಮಣ್ಣನವರ ಎಂದರೆ ಇರಬಹುದು ಆದರೆ ನನಗೆ ಗೊತ್ತಿಲ್ಲ. ನಿಪಿಃ 7 ಪಂಚನಾಮೆಯಲ್ಲಿ ರಾಜು ಪದ್ಮಣ್ಣವರ ಪಂಚನಾಮೆಯ ಕಾಲಕ್ಕೆ ಇದ್ದರು ಎಂದು ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿಃ 7 ಪಂಚನಾಮೆಯಲ್ಲಿ ಯಾರ ಯಾರ ಹೆಸರು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಪಂಚನಾಮೆಯ ಮಾಡಿದ ಮನೆಯ ಚೆಕ್ಕುಬಂದಿಯನ್ನು ನನಗೆ ಹೇಳಲು ಬರುವುದಿಲ್ಲ.

13. ನಿಪಿಃ 10 ಹಾಗೂ 11 ಫೋಟೋಗಳನ್ನು ಪೋಲೀಸ್ ಠಾಣೆಯಲ್ಲಿ ತೆಗೆದಿದ್ದಾರೆಂದು ಸೂಚಿಸುವುದು ಸರಿಯಲ್ಲ. ನಿಪಿಃ 10 ಫೋಟೋದಲ್ಲಿ ಕೇವಲ 7 ಜನ ಇದ್ದಾರೆ ಎನ್ನುವುದು ಸರಿ.

ಪ್ರಶ್ನೆಃ ನಿಪಿಃ 7 ಪಂಚನಾಮೆಯಲ್ಲಿ ಮು.ಮಾ. 1 ರಿಂದ 5 ವಸ್ತುಗಳು ಎಲ್ಲಿ ಎಲ್ಲಿ ಸಿಕ್ಕವು ಎಂದು ಬರೆದಿಲ್ಲ ?
ಉತ್ತರಃ ನನಗೆ ಆ ವಿಚಾರ ಗೊತ್ತಿಲ್ಲ, ಆದರೆ ಅವುಗಳು ಬೆಡ್ ರೂಮ್ ನಲ್ಲಿ ಸಿಕ್ಕಿರುತ್ತವೆ.

14. ಮು.ಮಾ. 1 ರಿಂದ 5 ವಸ್ತುಗಳು ಬೆಡ್ ರೂಮ್ ನಲ್ಲಿ ಸಿಗಲಿಲ್ಲ ಆದರೂ ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. ಪಂಚನಾಮೆಯಲ್ಲಿ ಸ್ಥಳದಲ್ಲಿ ಯಾವುದೇ ಬೆರಳು ಮುದ್ರೆಗಳು ಸಿಕ್ಕಿಲ್ಲ ಎಂದು ಬರೆದ ವಿಚಾರ ನನಗೆ ಗೊತ್ತಿಲ್ಲ. ಪಂಚನಾಮೆ ಮಾಡಿದ ಮಹಡಿಯಲ್ಲಿ ಒಟ್ಟು ಎರಡು ಕೋಣೆಗಳು ಇದ್ದವು.

15. ಮು.ಮಾ. 3 ನೀರಿನ ಬಾಟಲಿ ಪೋಲೀಸ್ ಠಾಣೆಯಲ್ಲಿ ನೀರು ಕುಡಿಯಲು ತಂದಿದ್ದ ಬಾಟಲಿಯನ್ನು ಪ್ಯಾಕ್ ಮಾಡಿ ಈ ಪ್ರಕರಣದಲ್ಲಿ ಹಾಜರುಪಡಿಸಿದ್ದಾರೆಂದು ಸೂಚಿಸುವುದು ಸರಿಯಲ್ಲ. ಮು.ಮಾ. 4 ರಂತಹ ಸಿರಿಂಜ್ ಗಳು ಮೆಡಿಕಲ್ ಶಾಪ್ ನಲ್ಲಿ ಸಿಗುತ್ತವೆ ಎಂದರೆ ಸರಿ. ಮೆಡಿಕಲ್ ಶಾಪ್ ನಲ್ಲಿ ಖರೀದಿ ಮಾಡಿ ತಂದು ಪೋಲೀಸರು ಪೋಲೀಸ್ ಠಾಣೆಯಲ್ಲಿ ಪ್ಯಾಕ್ ಮಾಡಿ ಸಾಕ್ಷ್ಯವಾಗಿ ಹಾಜರುಪಡಿಸಿದ್ದಾರೆಂದು ಸೂಚಿಸುವುದು ಸರಿಯಲ್ಲ. ಮು.ಮಾ. 1 ತಲೆದಿಂಬು ಹಾಗೂ ಮು.ಮಾ. 2 ಹಾಗೂ 5 ರಂತಹ ತಲೆದಿಂಬಿನ ಕವರ್ ಗಳು ಅಂಗಡಿಗಳಲ್ಲಿ ಸಿಗುತ್ತವೆ ಎನ್ನುವುದು ಸರಿ. ಆದರೆ ಸಾಕ್ಷಿ ಹೇಳುತ್ತಾರೆ ಈ ಎಲ್ಲಾ ವಸ್ತುಗಳು ಪಂಚನಾಮೆಯ ಕಾಲಕ್ಕೆ ಕೋಣೆಯಲ್ಲಿ ಸಿಕ್ಕವು ಎಂದು. ನಿಪಿಃ 7 ಪಂಚನಾಮೆಯನ್ನು ಯಾರು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಫೋಟೋಗಳನ್ನು ತೆಗೆಯಲು ಅಲ್ಲಿ ಬಂದಿದ್ದರು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ.

16. ನಾನು ರಾಜು ಪದ್ಮನ್ನನವರ ಹಾಗೂ ಪೋಲೀಸರ ಮಾತುಕೇಳಿಕೊಂಡು ಈ ಪ್ರಕರಣದಲ್ಲಿ ಪೋಲೀಸರು ನನ್ನನ್ನು ಪಂಚನಾಮೆಗೆ ಕರೆದಿದ್ದರು, ನನ್ನ ಸಮಕ್ಷಮ ನಿಪಿಃ 7

ರಂತಹ ಪಂಚನಾಮೆಯನ್ನು ಬರೆದಿದ್ದು, ಮು.ಮಾ. 1 ರಿಂದ 5 ರಂತಹ ವಸ್ತುಗಳನ್ನು ನನ್ನ ಸಮಕ್ಷಮ ಜಪ್ತು ಮಾಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. ನಾನು ಪಂಚನಾಮೆಯಲ್ಲಿ ಹೇಳಿದಂತಹ ಜಾಗಕ್ಕೆ ಹೋಗಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಿಪಿಃ 7 ನ್ನು ಪೋಲೀಸ್ ಠಾಣೆಯಲ್ಲಿ ತಯಾರು ಮಾಡಿ ಸಹಿ ಪಡೆದಿದ್ದಾರೆಂದು ಸೂಚಿಸುವುದು ಸರಿಯಲ್ಲ. ನಿಪಿಃ 12 ಮತ್ತು 13 ಸೃಷ್ಟಿಸಿದ ದಾಖಲೆಗಳು ಎಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.